ಶ್ರೀ ಜಿ. ಪುಟ್ಟಸ್ವಾಮಿಗೌಡ.—ಏತ ನೀರಾವರಿ ಯೋಜನೆಗಳು ಆಗಬೇಕು. ಏತ ನೀರಾವರಿ ಯೋಜನೆಯಿಂದ ೩ ಲಕ್ಷದ ೧೩ ಸಾವಿರ ಎಕರೆಗಳಿಗೆ ನೀರಾವರಿಯಾಗಬೇಕೆಂದು ಯೋಜನೆ ಇದ್ದರೂ ಕೂಡ ಅಲ್ಲಿರತಕ್ಕ ಪಂಪುಗಳು ಮತ್ತು ಯಂತ್ರಗಳಿಂದ ಆಗುತ್ತಿಲ್ಲ ಅವು ಬಹಳ ಹಳೆಯವು. ನಾವು ಯೋಜಿಸಿರುವ ಪ್ರದೇಶಕ್ಕೆ ಆ ಯಂತ್ರಗಳಿಂದ ನೀರನ್ನು ಕೊಡುವುದಕ್ಕೆ ಆಗುತ್ತಿಲ್ಲ. ಮಾನ್ಯ ಸದಸ್ಯರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವುಗಳಿಗೆ ಕಾಯಕಲ್ಪ ಮಾಡಬೇಕೆನ್ನುವ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ಹಳೆಯ ಪಂಪುಗಳನ್ನು ಬದಲಾಯಿಸಿ ಹೊಸ ಪಂಪುಗಳನ್ನು ಹಾಕಬೇಕು. ನಾವೇನು ಇಷ್ಟು ಎಕರೆಗೆ ನೀರನ್ನು ಒದಗಿಸಬೇಕೆಂದು ನಿಗದಿ ಮಾಡಿದ್ದೇವೆ, ಆ ಪ್ರದೇಶಕ್ಕೆ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏತ ನೀರಾವರಿ ನಿಗಮದ ಬಗ್ಗೆ ಹೇಳಿದ್ದಾರೆ, ಅದಕ್ಕೆ ಹೊಸದಾಗಿ ಚಾಲನೆಯನ್ನು ಕೊಡುತ್ತಿದ್ದೇವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಏತ ನೀರಾವರಿ ನಿಗಮಗಳನ್ನು ಏನು ಮಾಡಿದ್ದಾರೆ ಅಲ್ಲಿ ಬಹಳ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವ ಆಪಾದನೆ ಬಂದಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿ ನೋಡಿದ್ದೇವೆ. ಅದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಏತ ನೀರಾವರಿ ನಿಗಮಗಳಲ್ಲಿ ಯಾವ್ಯಾವ ಭ್ರಷ್ಟಾಚಾರ ನಡೆದಿದೆ? ಎಷ್ಟು ಪ್ರಮಾಣದ ಭ್ರಷ್ಟಾಚಾರ ನಡೆದಿದೆ? ಅಲ್ಲಿರತಕ್ಕ ಅಧಿಕಾರಿಗಳ ಮೇಲೆ ಏನಾದರೂ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ರೂಪಿಸಿದ್ದೀರಾ. ಸರಿಯಾದ ರೀತಿಯಲ್ಲಿ ಏತ ನೀರಾವರಿ ನಿಗಮ ಕಾರ್ಯಕ್ರಮ ನಡೆಸುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ? ಹಾಗಿದ್ದರೆ ಅದರ ರೂಪರೇಷೆಗಳನ್ನು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಲಿಫ್ಟ್ ಇರಿಗೇಶನ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ನಾನು ಮೇಲಿಂದಮೇಲೆ ಹೇಳಿದ್ದೇನೆ. ಆದ್ದರಿಂದ ಲಿಫ್ಟ್ ಇರಿಗೇಶನ್ ಬಗ್ಗೆ ಭ್ರಷ್ಟಾಚಾರ ಉದ್ಭವ ವಾಗುವುದಿಲ್ಲ. ಹಾಗೇನಾದರೂ ಮಾನ್ಯ ಸದಸ್ಯರು...

ಶ್ರೀ ಕೆ. ಲಕ್ಕಪ್ಪ.—ಭ್ರಷ್ಟಾಚಾರ ನಡೆಸಿದ್ದಾರೆ, ಕೆಲಸ ಮಾಡುತ್ತಿಲ್ಲ ಎಂಬ ಆಪಾದನೆಗಳು ಪತ್ರಿಕೆಗಳಲ್ಲೇ ಬಂದಿರತಕ್ಕದ್ದು. ಇದು ಅನೇಕ ಕಡೆ ನಡೆದಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ ಎಂದು ನಾನು ಒಪ್ಪುತ್ತೇನೆ. ಕಾರಣ ಕೂಡ ಹೇಳಿದ್ದೇನೆ. ಆದರೆ ಭ್ರಷ್ಟಾಚಾರ ಆಪಾದನೆ ಖಂಡಿತವಾಗಿ ಇದ್ದರೆ ತಮ್ಮ ಮೂಲಕ ಮಾನ್ಯ ಸದಸ್ಯರು ತಮ್ಮ ಮೂಲಕ ಸ್ಪಷ್ಟಪಡಿಸಿದರೆ ನಾನು ತನಿಖೆ ಮಾಡಿಸುವುದಕ್ಕೆ ಬದ್ಧನಾಗಿದ್ದೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ತುಮಕೂರು—ಬೆಂಗಳೂರು ನಡುವೆ ತಡೆ ರಹಿತ ಬಸ್ಸುಗಳ ಬಗ್ಗೆ

೩೪೩. ಶ್ರೀ ಎಸ್. ಶಫಿ ಅಹಮದ್ (ತುಮಕೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಯಾಣಿಕರ ಬೇಡಿಕೆಯನ್ನು ಈಡೇರಿಸಲು ತುಮಕೂರಿನಿಂದ ಬೆಂಗಳೂರಿಗೆ ಸಂಚರಿಸುವ ತಡೆ ರಹಿತ ಬಸ್ಸುಗಳನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರತಿ ದಿಕ್ಕಿನಿಂದ ೨೬ ತಡೆರಹಿತ ಬಸ್ಸುಗಳನ್ನು ಓಡಿಸಲಾಗುವದಲ್ಲದೇ ತುಮಕೂರಿನಿಂದ ಬೆಂಗಳೂರಿಗೆ ೬ ಹೆಚ್ಚುವರಿ ತಡೆರಹಿತ ಟ್ರಿಪ್ಪುಗಳನ್ನು ದಿನಾಂಕ ೧೦-೬-೧೯೯೦ ರಿಂದ ಪ್ರಾರಂಭಿಸಲಾಗಿದೆ.

ದಾವಣಗೆರೆಯಲ್ಲಿ ಬಸ್‌ಸ್ಟ್ಯಾಂಡಿನಲ್ಲಿಯ ಅವ್ಯವಸ್ಥೆಯ ಬಗ್ಗೆ

೪೭೦. ಶ್ರೀ ವೈ ಎಂ. ವೀರಣ್ಣ (ದಾವಣಗೆರೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆಯಲ್ಲಿ ಪ್ರಾರಂಭಿಸಲಾದ ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ನಿಲ್ದಾಣವು ಹಲವಾರು ಅವ್ಯವಸ್ಥೆಯ ಆಗರವಾಗಿದೆಯೆಂಬ ದೂರು ಸರ್ಕಾರಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಅವ್ಯವಸ್ಥೆಯನ್ನು ನಿವಾರಿಸಲು ತೆಗೆದುಕೊಂಡ ಕ್ರಮಗಳೇನು?